ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಆಸ್ಪತ್ರೆ ಕಟ್ಟಡಕ್ಕೆ ಮಾತ್ರ ಮಂಜೂರಾತಿ ನೀಡಲಾಗಿದ್ದು ಅದರ ಅಂದಾಜಂ ವೆಚ್ಚ ೯ ಲಕ್ಷ ರೂ. ಗಳು. ಈವರೆಗೆ ಅದಕ್ಕಾಗಿ ೫.೮೨ಟಿ ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಗಿದೆ.

ಆ) ಕಾಮಗಾರಿಯಂ ಭಾವಣಿ ಹಂತದವರೆಗೆ ಬಂದಿದೆ. ೧೯೮೮–೮೯ನೇ ಸಾಲಿಗೆ ೨.೯೦ ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಕಾಮಗಾರಿಯು ಈ ವರ್ಷದ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಕಂಟುಂಬ ಕಲ್ಯಾಣದ ಪ್ರಗತಿ

.೨೧೪೦. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ ?

ಅ) ಮೈಸೂರು ಮಂತ್ತು ಕೊಡಗು ಜಿಲ್ಲೆಗಳಲ್ಲಿ ಕಟುಂಬ ಕಲ್ಯಾಣ ಪ್ರಗತಿಯಲ್ಲಿ ಪ್ರಥಮ ಸ್ಥಾನ ಗಳಿಸಲು ಸಂಳ್ಳಿ ದಾಖಲೆ ಸೃಷ್ಟಿಸಿ ಎರಡು ವರ್ಷಗಳಲ್ಲಿ ಬಹುಮಾನ ಗಳಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಹಿನ್ನೆಲೆಯಲ್ಲಿ ಇವ್ಯಾಲ್ಯೂಯೇಶನ್ ಟೀಂನವರು ತಪಾಸಣೆಯನ್ನು ಈ ಜಿಲ್ಲೆಗಳಲ್ಲಿ ಮಾಡಿರುವರೆ ? ಮಾಡಿದ್ದಲ್ಲಿ ಅವರ ವರದಿ ಏನು ?

ಇ) ಈ ರೀತಿ ಸುಳ್ಳು ದಾಖಲು ಸೃಷ್ಟಿಸಿ ಬಹುಮಾನ ಪಡೆಯುವಲ್ಲಿ ಡೈರೆಕ್ಟರೇಟ್ ಆಫ್ ಹೆಲ್ತ್‌ನ ಮುಖ್ಯ ಅಧಿಕಾರಿಯವರು ಪಾಲ್ಗೊಂಡ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ಇಲ್ಲ.

ಆ) ದಿನಾಂಕ ೧೭–೮–೮೭ ರಂದು ಆಗಸ್ಟ್ ೧೬ ರಿಂದ ಆಗಸ್ಟ್ ೯೭ ರ ವರೆಗಿನ ಅವಧಿಯಲ್ಲಿ ಕೊಡುಗು ಜಿಲ್ಲೆಯ ಶಾಂತಿಕೊಪ್ಪ ಹಾಗೂ ಶನಿವಾರ ಸಂತೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ಕೇಂದ್ರ ಸರ್ಕಾರದ ಪಾಪ್ಯುಲೇಷನ್ ತಂಡದವರು ಮಾದರಿ ತಪಾಸಣೆ ಮಾಡಿದ್ದಾರೆ.

ಇ) ಇಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿ ಗಿರಣಿ ಮಾಲೀಕರಿಂದ ಬರಬೇಕಾಗಿರುವ ಹಣದ ಬಗ್ಗೆ

೨೪೧೫. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಗಿರಣಿ ಮಾಲೀಕರಿಂದ ಸರ್ಕಾರಕ್ಕೆ ಬರಬೇಕಾದ ಹಣ ಎಷ್ಟು,

ಆ) ಹಾಗಿದ್ದಲ್ಲಿ ಯಾರ್ಯಾರಿಂದ ಎಷ್ಟೆಷ್ಟು ಹಣ ಸರ್ಕಾರದವರಿಗೆ ಬರಬೇಕಾಗಿದೆ,

ಇ) ಈ ಹಣ ವಸೂಲಿಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಸವರಾಜ ಪಾಟೀಲ್ ತಿಮ್ಮನಗೌಡ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).—

ಅ) ೨,೩೫,೬೯,೬೧೬–೩೬ ಪೈಸೆ.

ಆ) ಅನುಬಂಧ–೧ ರಲ್ಲಿ ಪಂಡಿಸಲಾಗಿದೆ.

ಇ) ಪಂಚಾಯಿತಿದಾರರು ನೀಡಿದ ತೀರ್ಪುಗಳ ಪ್ರಕಾರ ಡಿಕ್ರಿಯನ್ನು ಜಾರಿಗೊಳಿಸಲು ಶಿವಮೊಗ್ಗ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿದ್ದು ಪ್ರಕರಣಗಳು ನ್ಯಾಯಾಲಯದ ಮುಂದಿದೆ.

ಅನುಬಂಧ – ೧

			ರೂ.–ಪೈಸೆ
೧)	ಶ್ರೀ ಮೂರುತಿ ಅಕ್ಕಿ ಗಿರಣಿ, ಹೊನ್ನಾಳಿ	...	೧,೦೦,೮೫೪–೭೨
೨)	ಶ್ರೀ ಶಿವಶಕ್ತಿ ಲಕ್ಕಿ ಗಿರಣಿ, ಶಿರಾಳಕೊಪ್ಪ	...	೫,೪೭,೩೦೫–೦೦
೩)	ಶ್ರೀ ಶಂಕರ ಅಕ್ಕಿ ಗಿರಣಿ, ಗೊಲ್ಲರಹಳ್ಳಿ	...	೮,೮೪,೨೦೪–೪೬
೪)	ಶ್ರೀ ರುಬ್ಬಾಣ ಅಕ್ಕಿ ಗಿರಣಿ, ಕೊಳಿಹೊನ್ನೂರು	...	೩೫,೦೯,೪೦೧–೦೩
೫)	ಶ್ರೀ ಶೈಲಿ ಮಲ್ಲಿಕಾರ್ಜುನ ಅಕ್ಕಿ ಗಿರಣಿ, ಚೀಲೂರು	...	೬,೦೩,೭೫೦–೩೧
೬)	ಶ್ರೀ ಮಂಗಳೂರು ಅಕ್ಕಿ ಮತ್ತು ಅವಲಕ್ಕಿ ಗಿರಣಿ, ಶಿವಮೊಗ್ಗ	...	೩೬,೮೩,೩೫೦–೫೨
೭)	ಶ್ರೀ ಗಜಾನನ ಅಕ್ಕಿ ಗಿರಣಿ, ಸಾಗರ	...	೩,೫೨,೫೩೨–೪೦
೮)	ಶ್ರೀ ಗಿರಿಜೇಶ್ವರ ಅಕ್ಕಿ ಗಿರಣಿ, ಬೇಲೂರು	...	೩,೫೪,೨೧೮–೮೧
೯)	ಶ್ರೀ ಕೃಷ್ಣ ಅಕ್ಕಿ ಗಿರಣಿ, ಶಿವಮೊಗ್ಗ	...	೨,೮೦,೭೩೯–೩೯
೧೦)	ಶ್ರೀ ಚಂದ್ರಶೇಖರ್ ಅಕ್ಕಿ ಗಿರಣಿ, ಶಿವಮೊಗ್ಗ	...	೧೭,೨೧೬–೭೯
೧೧)	ಶ್ರೀ ಶ್ರೀವಿನಾಯಕ ಅಕ್ಕಿ ಗಿರಣಿ, ಕಡಲ ಕಟ್ಟಿ	...	೫,೪೮,೨೨೫–೭೯
೧೨)	ಶ್ರೀ ನಂಜುಂಡೇಶ್ವರ ಅಕ್ಕಿ ಮತ್ತು ಹಿಟ್ಟಿನ ಗಿರಣಿ, ಬೆನಕನ ಹಳ್ಳಿ	...	೫೩,೮೯೯–೬೪
೧೩)	ಶ್ರೀ ಮಲೆನಾಡ್ ಟ್ರೇಡರ್ಸ್, ಶಿವಮೊಗ್ಗ	...	೯೧,೩೭,೬೫೦–೬೯
೧೪)	ಶ್ರೀ ಜಯದೇವ ಅಕ್ಕಿ ಗಿರಣಿ, ಶಿವಮೊಗ್ಗ	...	೧೯,೧೮೬–೮೩
೧೫)	ಶ್ರೀ ವೀರಭದ್ರೇಶ್ವರ ಅಕ್ಕಿ ಮತ್ತು ಎಣ್ಣೆ ಗಿರಣಿ, ಶಿವಮೊಗ್ಗ	...	೧೦,೨೬,೯೮೮–೭೫
೧೬)	ಶ್ರೀ ಕೆ.ಎಂ.ಕೆ. ಅಕ್ಕಿ ಗಿರಣಿ, ಶಿವಮೊಗ್ಗ	...	೫೨,೭೮,೫೧೬–೧೧
೧೭)	ಶ್ರೀ ಸಿದ್ದೇಶ್ವರ ಅಕ್ಕಿ ಗಿರಣಿ, ಶಿವಮೊಗ್ಗ	...	೧೭,೬೩,೮೭೮–೬೬
೧೮)	ಶ್ರೀ ಮಲ್ಲಿಕಾರ್ಜುನ ಅಕ್ಕಿ ಗಿರಣಿ, ಶಿವಮೊಗ್ಗ	...	೬೧,೪೪೧–೫೦
	ಒಟ್ಟಿಗೆ	...	೨,೩೫,೨೩,೨೩೨–೧೦
೧೯)	ಶ್ರೀ ಭಾರತ್ ಗಿರಣಿ, ಶಿವಮೊಗ್ಗ		೪೬,೩೮೪–೨೬
	ಒಟ್ಟಿಗೆ	...	೨,೩೫,೬೯,೬೧೬–೩೬
೨೦)	ಶ್ರೀ ಶಂಕರ್ ಗಿರಣಿ, ಶಿವಮೊಗ್ಗ (ಪಂಚಾಯಿತಿದಾರರು ತೀರ್ಪನ್ನು ನೀಡಿಲ್ಲ)	...	೫೧,೯೪,೨೪೬–೨೩

ಹೊಸನಗರ ತಾಲ್ಲೂಕಿನಲ್ಲಿ ಹಂದಿಗೋಡು ಖಾಯಿಲೆ

೨೨೮೫. ಶ್ರೀ ಬಿ. ಸ್ವಾಮಿರಾವ್, (ಹೊಸನಗರ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸನಗರ ತಾಲ್ಲೂಕಿನಲ್ಲಿ ಹಂದಿಗೋಡು ಖಾಯಿಲೆಗೆ ಈಡಾಗಿರುವ ಜನರ ಸಂಖ್ಯೆ ಎಷ್ಟು?
(ಗ್ರಾಮವಾರು ವಿವರ ನೀಡುವುದು)

ಆ) ಸದರಿ ಖಾಯಿಲೆಯಿಂದ ನೊಂದವರಿಗೆ ಮಾಶಾಸನ ರೂ. ೫೦ ರಿಂದ ೨೫೦ ರವರೆಗೆ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?